**Shikshan Sanshodhan : Journal of Arts, Humanities and Social Sciences** ISSN(o): 2581-6241
Monthly, Peer-Reviewed, Refereed, Indexed Journal Impact Factor: 9.134
Volume - 8, Issue - 11, November - 2025

DOIs:10.2018/SS/202511002 --:-- Research Paper / Article / Review

# ಪುರಂದರದಾಸರು ಮತ್ತು ತ್ಯಾಗರಾಜರು

**Dr. Jyothi Shankar**
Associate Professor, Department of Research and Studies in Kannada, Karnataka State Open University, Mysuru, India
Email – gurunatha2025@gmail.com

***ಪ್ರಬಂಧದ ಸಾರ:*** *ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ದಾಸ ಸಾಹಿತ್ಯವೂ ಒಂದು. ಭಕ್ತಿಪಂಥವು ಭಾರತೀಯ ಸಂಸ್ಕೃತಿಯಲ್ಲಿ ಬಹುದೊಡ್ಡ ಮೈಲಿಗಲ್ಲು. ವಿಶೇಷವಾಗಿ ೧೫ನೇ ಶತಮಾನದಲ್ಲಿ ಬಂದಂತಹ ಹರಿದಾಸ ಭಕ್ತಿಪಂಥವು ಒಂದು ಕ್ರಾಂತಿಯನ್ನೇ ಉಂಟುಮಾಡಿತು. ಭಕ್ತಿ ಸಾಹಿತ್ಯದಿಂದ ದಾಸರು ಜನರಿಗೆ ಹತ್ತಿರವಾಗುವುದರ ಜೊತೆಗೆ ತಮ್ಮ ಸಾಹಿತ್ಯದ ಮೂಲಕ ಸಮಾಜ ತಿದ್ದುವ ಕೆಲಸವನ್ನೂ ಮಾಡಿದ್ದಾರೆ. ಹೀಗೆ ಬಂದಂತಹ ದಾಸರಲ್ಲಿ ಪುರಂದರದಾಸರು ಪ್ರಮುಖರು. ಅವರು ಸಂಗೀತ ಮತ್ತು ಸಾಹಿತ್ಯ ಎರಡರಲ್ಲೂ ಪರಿಣಿತಿ ಹೊಂದಿದ್ದರಿಂದ ಮುಂಬರುವ ಸಂಗೀತಜ್ಞರಿಗೆ ಮತ್ತು ಸಾಹಿತ್ಯಾಸಕ್ತರಿಗೆ ದಾರಿಯನ್ನು ಹಾಕಿಕೊಟ್ಟಿದ್ದಾರೆ. ಅದೇ ಪಂಕ್ತಿಯಲ್ಲಿ ಬಂದವರು ಮತ್ತೊಬ್ಬ ಶ್ರೇಷ್ಠ ಕವಿಗಳೂ, ವಾಗ್ಗೇಯಕಾರರೂ ಆದ ಶ್ರೀತ್ಯಾಗರಾಜರು. ಪುರಂದರದಾಸರಂತೆಯೇ ಭಕ್ತಿ ಸಾಮ್ರಾಜ್ಯದಲ್ಲಿಯೇ ಅನಭಿಷಿಕ್ತ ದೊರೆಗಳಾಗಿ ಮೆರೆದಿದ್ದಾರೆ. ಪುರಂದರದಾಸರಿಂದ ಪ್ರಭಾವಿತರಾಗಿ ಶ್ರೀತ್ಯಾಗರಾಜರು ವಿಶಿಷ್ಟ ಕೃತಿಗಳನ್ನು ರಚಿಸಿದ್ದಾರೆ. ತಮ್ಮ ಕೃತಿಗಳ ಮೂಲಕ ಅಗ್ರಪಂಕ್ತಿಯಲ್ಲಿ ಇರುವಂತಹ ವಾಗ್ಗೇಯಕಾರರಲ್ಲಿ ತ್ಯಾಗರಾಜರೂ ಕೂಡ ಒಬ್ಬರು.*

***ಪ್ರಮುಖ ಪದಗಳು:*** *ತ್ಯಾಗರಾಜ, ಪುರಂದರದಾಸ, ಕರ್ನಾಟಕ ಸಂಗೀತ, ಭಕ್ತಿ, ಕೀರ್ತನೆ.*

## 1. ಪುರಂದರದಾಸರು ಮತ್ತು ತ್ಯಾಗರಾಜರು- ಜೀವನ

ಕರ್ನಾಟಕ ಸಂಗೀತದ ಪಿತಾಮಹ ಎಂದು ಕರೆಯಲ್ಪಡುವ ಪುರಂದರದಾಸರು ದಕ್ಷಿಣ ಭಾರತದ ಸಂಗೀತ ಭೂದೃಶ್ಯದಲ್ಲಿ ಅಳಿಸಲಾಗದ ಛಾಪು ಮೂಡಿಸಿದ ಪೌರಾಣಿಕ ಸಂಯೋಜಕ, ಕವಿ ಮತ್ತು ಸಮಾಜ ಸುಧಾರಕರಾಗಿದ್ದಾರೆ. ದಾಸರು ರಚಿಸಿದ ಕೀರ್ತನೆ, ಉಗಾಭೋಗಗಳು ಸಾಮಾನ್ಯ ಜನರ ನುಡಿಗಳಲ್ಲೂ ಕಾಣುತ್ತವೆ. ದಾಸರು ತಮ್ಮ ಸಂಗೀತ ರಚನೆಗಳ ಮೂಲಕ ಜನಜಾಗೃತಿಯನ್ನು ಮೂಡಿಸಿ, ಲೌಕಿಕ ತತ್ವಗಳನ್ನು ಉಪದೇಶಿಸಿ, ಆಧ್ಯಾತ್ಮಿಕ ತತ್ವಗಳನ್ನು ಸರಳವಾಗಿ ನಿರೂಪಿಸಿ, ಭಾವೈಕ್ಯತೆಯನ್ನು ತಮ್ಮ ಕೀರ್ತನೆಗಳ ಮೂಲಕ ಸಾರಿದ್ದಾರೆ.

ಪುರಂದರಗಡದಲ್ಲಿದ್ದ ವರದಪ್ಪನಾಯಕ ಮತ್ತು ಲಕ್ಷ್ಮಕ್ಕ ದಂಪತಿಗಳಿಗೆ ಕ್ರಿ. ಶ. ೧೪೮೪ ರಲ್ಲಿ ಜನಿಸಿದ ಗಂಡು ಮಗುವಿಗೆ ಶ್ರೀನಿವಾಸನಾಯಕನೆಂದು ನಾಮಕರಣ ಮಾಡಿದರು. ಬಾಲ್ಯದಲ್ಲಿಯೇ ಸಾಹಿತ್ಯ, ಸಂಗೀತ, ಸಂಸ್ಕೃತ, ವೇದ, ಪುರಾಣ, ಉಪನಿಷತ್ತು ಹಾಗೂ ಅಲಂಕಾರ ಶಾಸ್ತ್ರಗಳಲ್ಲಿ ಅಧ್ಯಯನವನ್ನು ನಡೆಸಿ ಪಾರಂಗತರಾದರು. ನಂತರ ಚಿನಿವಾರ ವೃತ್ತಿಯನ್ನೇ ಮಂದುವರೆಸುತ್ತಾ ಸರಸ್ವತೀ ಎಂಬ ಸುಸಂಸ್ಕೃತ ಕನ್ಯೆಯನ್ನು ವಿವಾಹವಾದರು. ತಾವು ಗಳಿಸಿದ್ದ ಅಪಾರ ಐಶ್ವರ್ಯವನ್ನು ದಾನಮಾಡಿ, ವ್ಯಾಸರಾಯರ ಶಿಷ್ಯರಾದರು. ಪುರಂದರವಿಠಲನ ಭಕ್ತರಾಗಿ ಶ್ರೀ ಪುರಂದರದಾಸರಾದರು. ಕರ್ನಾಟಕ ಸಂಗೀತಕ್ಕೆ ಅವರಿತ್ತ ಕೊಡುಗೆ ಅಪಾರ. ಪುರಂದರವಿಠಲ ಅಂಕಿತದೊಡನೆ ಗೀತೆ, ಸುಳಾದಿ, ಉಗಾಭೋಗ, ಕೀರ್ತನೆ, ವೃತ್ತನಾಮ, ಪದ್ಯ, ಗದ್ಯ, ಶ್ಲೋಕಗಳೇ ಮುಂತಾದ ಹಲವಾರು ರಚನೆಗಳನ್ನು ಅಪಾರ ಸಂಖ್ಯೆಯಲ್ಲಿ ರಚಿಸಿದ್ದಾರೆ. ವ್ಯಾಸರಾಯರು ವೇದ- ಉಪನಿಷತ್ತುಗಳು, ದರ್ಶನ ಮತ್ತಿತರ ಶಾಸ್ತ್ರಗಳ ಪರಿಚಯ ಮಾಡಿಸಿಕೊಟ್ಟರು. ಇದರಿಂದ ಅಗಾಧವೂ ಅದ್ಭುತವೂ ಅತೀತವೂ ಆದ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಲು ಅನುಕೂಲವಾಯಿತು. ಅಭ್ಯಾಸಗಾನಕ್ಕೆ ಸೇರುವ ಸ್ವರಾವಳಿಗಳನ್ನು ಯೋಜಿಸಿ, ಮಾಯಾಮಾಳವಗೌಳ ರಾಗದಲ್ಲಿ ಪ್ರಾಥಮಿಕ ಪಾಠಗಳು ನಡೆಯುವಂತೆ ರೂಪಿಸಿದ್ದಾರೆ. ಇವರ ರಚನೆಗಳು ಕನ್ನಡ ಹಾಗೂ ಸಂಸ್ಕೃತ ಭಾಷೆಯಲ್ಲಿದ್ದು ದಾಸರ ಕೀರ್ತನೆಗಳನ್ನು ದಾಸರ ಪದಗಳು ಮತ್ತು ದೇವರನಾಮಗಳೆಂದು ಕರೆಯುತ್ತಾರೆ. ಗುರುಗಳಾದ ವ್ಯಾಸರಾಯರು ಇವರ ಸಂಗೀತ ರಚನೆಗಳನ್ನು 'ಪುರಂದರೋಪನಿಷತ್' ಎಂದು ಕರೆಯುವುದರ ಜೊತೆಗೆ 'ದಾಸರೆಂದರೆ ಪುರಂದರದಾಸರಯ್ಯ' ಎಂದು ಹಾಡಿದ್ದಾರೆ.

ಸಂಗೀತ ತ್ರಿಮೂರ್ತಿಗಳಲ್ಲಿ ವಯೋಮಾನದಿಂದ ದ್ವಿತೀಯರಾದ ಶ್ರೀತ್ಯಾಗರಾಜರು ಅದ್ವಿತೀಯ ವಾಗ್ಗೇಯಕಾರರು. ಕರ್ನಾಟಕ ಸಂಗೀತ ಚರಿತ್ರೆಯಲ್ಲಿ ಹದಿನೆಂಟನೆಯ ಶತಮಾನವನ್ನು ಸ್ವರ್ಣಯುಗವೆಂದು ಕರೆಯಬಹುದು. ಸಂಗೀತ ತ್ರಿಮೂರ್ತಿಗಳಾದ ಶ್ಯಾಮಾಶಾಸ್ತ್ರಿ, ತ್ಯಾಗರಾಜರು ಮತ್ತು ಮುತ್ತುಸ್ವಾಮಿ ದೀಕ್ಷಿತರು ತಮ್ಮ ಅಪೂರ್ವ ಕೊಡುಗೆಯಿಂದ ಕರ್ನಾಟಕ ಸಂಗೀತವನ್ನು ಚಿರನೂತನಗೊಳಿಸಿದರು. ಇವರಲ್ಲಿ ತ್ಯಾಗರಾಜರನ್ನು ವಾಗ್ಗೇಯಕಾರ ಸಾರ್ವಭೌಮರೆನ್ನಬಹುದು.

ತಿರುವಾರೂರಿನಲ್ಲಿ ರಾಮಬ್ರಹ್ಮ ಮತ್ತು ಸೀತಮ್ಮ ದಂಪತಿಗಳಿಗೆ ಕ್ರಿ. ಶ. ೧೭೬೭ ರಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ಸಂಗೀತ, ಸಾಹಿತ್ಯ, ವೇದ, ಪುರಾಣ, ಉಪನಿಷತ್ತು, ಅಲಂಕಾರ ಶಾಸ್ತ್ರಗಳ ಅಧ್ಯಯನ ಮಾಡಿದ್ದರು. ತಾಯಿಯ ಪರಂಪರೆಯಿಂದ ಸಂಗೀತ, ತಂದೆಯ ಕಡೆಯಿಂದ ಸಾಹಿತ್ಯ ಸರಸ್ವತಿ ಇವರಿಗೆ ಒಲಿದಿದ್ದು ಇವರು ಶ್ರೇಷ್ಠ ವಾಗ್ಗೇಯಕಾರರಾಗಲು ಅನುವು ಮಾಡಿಕೊಟ್ಟಿತು. ತಮ್ಮ ಐದನೆಯ ವಯಸ್ಸಿನಲ್ಲೇ ವಾಲ್ಮೀಕಿ ರಾಮಾಯಣದ ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳನ್ನು ಕಂಠಪಾಠ ಮಾಡಿ ಸುಮಧುರವಾಗಿ ಹಾಡುತ್ತಿದ್ದರು. ಸೊಂಠಿ ವೆಂಕಟರಮಣ ಭಾಗವತರ ಶಿಷ್ಯರಾಗಿ, ತಮ್ಮ ಎಂಟನೆಯ ವಯಸ್ಸಿನಲ್ಲಿ ಶಿಷ್ಯವೃತ್ತಿಯನ್ನು ಆರಂಭಿಸಿ, ಎರಡು ವರ್ಷಗಳ ಕಾಲದಲ್ಲೇ ಸಂಗೀತ ಪಾರಂಗತರಾದರು. ಗುರುವು ಹೆಮ್ಮೆಯಿಂದ 'ದೊರಕುನಾ ಇಟುವಂಟಿ ಶಿಷ್ಯುಡು' ಎಂದು ಸಭಿಕರ ಮುಂದೆ ತ್ಯಾಗರಾಜರನ್ನು ಹೊಗಳಿದ್ದಾರೆ. ಇವರು ಹದಿನೆಂಟನೆಯ ವಯಸ್ಸಿನಲ್ಲಿ ಪಾರ್ವತಿ ಎಂಬ ಕನ್ಯೆಯನ್ನು ವಿವಾಹವಾದರು. ಕೆಲ ವರ್ಷಗಳ ನಂತರ ಅವರು ಮೃತರಾಗಲು, ಅವರ ತಂಗಿ ಕಮಲಾಂಬರನ್ನು ವಿವಾಹವಾಗಿ ಸೀತಾ ಮಹಾಲಕ್ಷ್ಮೀ ಎಂಬ ಪುತ್ರಿಯನ್ನು ಪಡೆದರು. ಮುಂದೆ ರಾಮಕೃಷ್ಣನಂದಯತಿಗಳಿಂದ ತಾರಕನಾಮ ಉಪದೇಶವಾಯಿತು. ನಂತರ ತೊಂಬತ್ತಾರು ಕೋಟಿ ರಾಮನಾಮವನ್ನು ಇಪ್ಪತ್ತೊಂದು ವರ್ಷಗಳಲ್ಲಿ ಮುಗಿಸಿದರು. ಪ್ರತಿಯೊಂದು ಕೋಟಿ ರಾಮನಾಮ ಮುಗಿದಾಗ ಶ್ರೀರಾಮನು ಇವರಿಗೆ ದರ್ಶನ ಕೊಡುತ್ತಿದ್ದನಂತೆ. ನಾರದರು ಸ್ವರಾರ್ಣವ ಎಂಬ ಸಂಗೀತಶಾಸ್ತ್ರ ಗ್ರಂಥವನ್ನು ಶ್ರೀತ್ಯಾಗರಾಜರಿಗೆ ಪ್ರದಾನ ಮಾಡಿದರೆಂದು ಪ್ರತೀತಿ. ಶ್ರೀ ತ್ಯಾಗರಾಜರ ಪರಂಪರೆಯಲ್ಲಿ ಕರ್ನಾಟಕ ಸಂಗೀತವು ಸಮೃದ್ಧವಾಗಿ ಬೆಳೆದು, ಜನಮನವನ್ನು ಸೂರೆಗೊಂಡಿದೆ. ತ್ಯಾಗರಾಜರದ್ದು ಸರಳ ಜೀವನ. ನಿಧಿ ಚಾಲ ಸುಖಮಾ ಶ್ರೀ ರಾಮುನಿ ಸನ್ನಿಧಿ ಸೇವ ಸುಖಮಾ ಎಂದು ಹಾಡಿ ರಾಜಾಶ್ರಯವನ್ನು ತ್ಯಜಿಸಿ ರಾಮನ ಸೇವೆಯನ್ನು ಮಾಡಿದ ಪುಣ್ಯ ಪುರುಷರು. ನಾದೋಪಾಸನೆಯ ಮೂಲಕ ಮೋಕ್ಷವನ್ನು ಪಡೆಯಬಹುದೆಂದು ತಮ್ಮ ಜೀವನದ ಮೂಲಕ ತೋರಿಸಿದ್ದಾರೆ.

## 2. ಪುರಂದರದಾಸರು ಮತ್ತು ತ್ಯಾಗರಾಜರು- ಕೃತಿ ರಚನೆ

ಪುರಂದರದಾಸರ ಅಂಕಿತ ಪುರಂದರವಿಠಲ, ತ್ಯಾಗರಾಜರೂ ಕೂಡ ತಮ್ಮ ಕೃತಿಗಳಲ್ಲಿ ತ್ಯಾಗರಾಜ ಎಂಬ ಅಂಕಿತದೊಡನೆ ಹಲವಾರು ರಚನೆಗಳನ್ನು ಮಾಡಿದ್ದಾರೆ. ಅವುಗಳಲ್ಲಿ ದಿವ್ಯನಾಮ ಸಂಕೀರ್ತನೆಗಳು, ಉತ್ಸವ ಸಂಪ್ರದಾಯ, ಪ್ರಹ್ಲಾದ ಭಕ್ತಿ ವಿಜಯ, ನೌಕಾಚರಿತ್ರ ಮತ್ತು ಸೀತಾರಾಮ ವಿಜಯವೆಂಬ ಗೇಯ ನಾಟಕಗಳು, ಕೃತಿ ಗುಚ್ಛಗಳು, ಸ್ಥಳ ಕೃತಿಗಳು ಪ್ರಸಿದ್ಧವಾದವು.

ಕೃಷ್ಣ ಪರಮಾತ್ಮನ ಬಾಲಲೀಲೆಗಳು ಪುರಂದರದಾಸರಿಗೆ ಅತ್ಯಂತ ಪ್ರಿಯವಾಗಿವೆ. ಬಾಲಕೃಷ್ಣನ ಮನಮೋಹಕ ಲೀಲೆಗಳನ್ನು ವರ್ಣಿಸುವ ಅನೇಕ ಹಾಡುಗಳಿವೆ.

**ಕಡಗೋಲ ತಾರೆನ್ನ ಚಿನ್ನವೆ**
**ಮೊಸರೊಡೆದರೆ ಬೆಣ್ಣೆ ಬಾರದು ರನ್ನವೆ**
**ಅಣ್ಣನ ಒಡಗೊಂಡು ಬಾರಯ್ಯ ಸವಿ ಸವಿ**
**ಬೆಣ್ಣೆಯ ಮುದ್ದೆಯ ಮೆಲುವಿರಂತೆ**
**ಬಣ್ಣ ಸರವ ನಿನ್ನ ಕೊರಳಿಗೆ ಹಾಕುವೆ**
**ಚಿಣ್ಣರೊಡನೆ ಆಡಕಳುಹುವೆ ರಂಗ**

ಕೃಷ್ಣನನ್ನು ಕುರಿತಾದ ಬಾಲ್ಯ ಸಾಹಸಗಳು, ಬೆಣ್ಣೆ ಕದಿಯುವುದು, ಗೋಪಿಯರೊಂದಿಗೆ ಅವನ ತುಂಟತನ ಹೀಗೆ ಹಲವು ಬಾಲ್ಯ ಸಂಗತಿಗಳನ್ನು ಪುರಂದರದಾಸರು ತಮ್ಮ ಕೀರ್ತನೆಗಳಲ್ಲಿ ನಿರೂಪಿಸಿದ್ದಾರೆ. ಪುಟ್ಟ ಕೃಷ್ಣನ ಗೆಜ್ಜೆಯ ಧ್ವನಿ, ಅವನ ಪಾದದ ವರ್ಣನೆ, ಕೃಷ್ಣನ ಆಭರಣಗಳು, ಅವನ ಮುಖಕಮಲದ ವರ್ಣನೆ- ಹೀಗೆ ಕೃಷ್ಣನ ಅನೇಕ ಬಾಲಲೀಲೆಗಳ ಚಿತ್ರಣವನ್ನು ಪುರಂದರದಾಸರು ಬಹಳ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ.

**ಬಂದನೇನೆ ರಂಗ ಬಂದನೇನೆ**
**ತಂದೆ ಬಾಲಕೃಷ್ಣ ನವನೀತ ಚೋರ**

**ಘಲುಘಲು ಘಲುರೆಂಬೊ ಪೊನ್ನಂದಿಗೆ ಗೆಜ್ಜೆ**
**ಹೊಳೆ ಹೊಳೆ ಹೊಳೆಯುವ ಪಾದವ ನೂರುತ**
**ನಲಿ ನಲಿದಾಡುವ ಉಂಗುರ ಅರಳೆಲೆ**
**ಥಳ ಥಳ ಥಳ ಹೊಳೆಯುತ ಶ್ರೀಕೃಷ್ಣ**

ಇದೇ ರೀತಿಯಲ್ಲಿ ಪುರಂದರದಾಸರು ಬಾಲ ಭಾಷೆಯನ್ನು ಬಹಳ ಮನೋಜ್ಞವಾಗಿ ತಮ್ಮ ಕೀರ್ತನೆಗಳಲ್ಲಿ ನಿರೂಪಿಸಿದ್ದಾರೆ. ಗುಮ್ಮ, ಮಮ್ಮು ಎನ್ನುವ ಪದಗಳ ಮೂಲಕ ಬಾಲ ಭಾಷೆಯ ಸ್ವಾದವನ್ನು ಜನಸಾಮಾನ್ಯರಿಗೆ ಉಣಬಡಿಸಿದ್ದಾರೆ.

**ಗುಮ್ಮನ ಕರೆಯದಿರೆ ಅಮ್ಮ ನೀನು**
**ಗುಮ್ಮನ ಕರೆಯದಿರೆ ||**
**ಸುಮ್ಮನೆ ಇದ್ದೇನು ಅಮ್ಮಿಯ ಬೇಡೆನು**
**ಮಮ್ಮು ಉಣ್ಣುತ್ತೇನೆ ಅಮ್ಮ ಅಳುವುದಿಲ್ಲ ||**

ತ್ಯಾಗರಾಜರೂ ಪುರಂದರದಾಸರಂತೆ ತಮ್ಮ ಕೃತಿಗಳಲ್ಲಿ ರಾಮನ ವರ್ಣನೆಯನ್ನು ಮಾಡುವಾಗ ಬಳಸಿರುವ ಬಾಲ ಭಾಷೆಯನ್ನು ಗಮನಿಸಬಹುದು. ಬಂಗಾರದ ವಸ್ತ್ರವನ್ನು ಧರಿಸಿರುವ, ತುಳಸೀ ಮಾಲೆಯನ್ನು ಆಭರಣವಾಗಿ ಧರಿಸಿರುವ, ಸೂರ್ಯ ಚಂದ್ರರನ್ನು ತನ್ನ ಕಣ್ಣುಗಳನ್ನಾಗಿ ಉಳ್ಳ ರಾಮನ ವರ್ಣನೆಯನ್ನು ಇಲ್ಲಿ ಮಾಡಲಾಗಿದೆ.

**ಏಲ ನೀದಯ ರಾದು ಪರಾಕು ಜೇಸೇ**
**ವೇಳ ಸಮಯಮು ಕಾದು**
**ಬಾಲ! ಕನಕಮಯ ಚೇಲ! ಸುಜನಪರಿ**
**ಪಾಲ! ಶ್ರೀರಮಾಲೋಲ! ವಿಧೃತ ಶರ**
**ಜಾಲ ಶುಭದ ಕರುಣಾಲವಾಲ! ಘನ**
**ನೀಲ ನವ್ಯ ವನ ಮಾಲಿಕಾಭರಣ**

ಪುರಂದರದಾಸರ ಕೀರ್ತನೆಗಳಲ್ಲಿ ದೈವ ವಿವಾಹದ ವರ್ಣನೆ ಕೂಡ ಬಹಳ ವಿಶೇಷವಾಗಿ ಮೂಡಿಬಂದಿದೆ. ಇಂತಹ ವಿಶೇಷ ಕೀರ್ತನೆಗಳಲ್ಲಿ ಒಂದಾದ ತುಳಸೀ ವಿವಾಹದ ವರ್ಣನೆ ಸೊಗಸಾಗಿ ಚಿತ್ರಿತವಾಗಿದೆ.

**ಕಲ್ಯಾಣಂ ತುಳಸೀ ಕಲ್ಯಾಣಂ**
**ಕಲ್ಯಾಣವು ನಮ್ಮ ಕೃಷ್ಣ ಶ್ರೀ ತುಳಸಿಗೆ |**
**ಬಲ್ಲಿದ ಶ್ರೀವಾಸುದೇವನಿಗೆ**
**ಉತ್ಥಾನ ದ್ವಾದಶಿ ದಿವಸದಲ್ಲಿ ಕೃಷ್ಣ |**
**ಉತ್ತಮ ತುಲಸಿಗೆ ವಿವಾಹವ ||**
**ಚಿತ್ತ ನಿರ್ಮಲರಾಗಿ ಮಾಡಿದವರಿಗೆ |**
**ಉತ್ತಮ ಗತಿಯೀವ ಪುರಂದರವಿಠಲ ||**

ಇದೇ ರೀತಿ ತ್ಯಾಗರಾಜರು ಸೀತಾರಾಮರ ವಿವಾಹವನ್ನು ಕುರಿತಂತೆ ರಚಿಸಿರುವ ಕೃತಿ ಬಹಳ ಜನಪ್ರಿಯವಾಗಿದೆ.

**ಸೀತಾ ಕಲ್ಯಾಣ ವೈಭೋಗಮೇ**
**ರಾಮಾ ಕಲ್ಯಾಣ ವೈಭೋಗಮೇ**
**ಪವನಜಾಸ್ತುತಿ ಪಾತ್ರ ಪಾವನ ಚರಿತ್ರಾ**
**ರವಿಸೋಮ ವರನೇತ್ರ ರಮಣೀಯ ಗಾತ್ರ**

ಪುರಂದರದಾಸರ ಮತ್ತು ತ್ಯಾಗರಾಜರ ಸಾಹಿತ್ಯ ಕೃಷಿ ಅಪಾರವಾದುದು. ಇಬ್ಬರೂ ಮಹಾನ್ ಸಂಗೀತಜ್ಞರೇ ಆದರೂ ಸಾಹಿತ್ಯರಚನೆಯಲ್ಲಿಯೂ ತಮ್ಮ ಸಮಕಾಲೀನರನ್ನು ಮೀರಿಸುವ ಪ್ರತಿಭೆಯುಳ್ಳವರು. ಇಬ್ಬರೂ ಭಕ್ತಕವಿಗಳೇ ಆದ್ದರಿಂದ ನವವಿಧ ಭಕ್ತಿಯನ್ನು ಪ್ರತಿಪಾದಿಸುವ ಕೃತಿಗಳನ್ನು ಕಾಣಬಹುದು. ವಿವಿಧ ಕ್ಷೇತ್ರಸಂದರ್ಶನ

ಕೃತಿಗಳು, ಮಂಗಳ, ಲಾಲಿ ಮತ್ತು ಜೋಗುಳಗಳು, ಲೋಕನೀತಿಯ ಕೃತಿಗಳ ರಾಶಿ ಇಬ್ಬರ ಸಾಹಿತ್ಯದಲ್ಲಿಯೂ ಕಾಣಬರುತ್ತದೆ. ಪುರಂದರದಾಸರ ಗಜೇಂದ್ರ ಮೋಕ್ಷ ಮತ್ತು ದ್ರೌಪದಿ ಮಾನ ಸಂರಕ್ಷಣ ಪ್ರಕರಣಗಳು ಷಟ್ಪದಿಯಲ್ಲಿದ್ದು ದಾಸರ ಕವಿತಾಪ್ರೌಢಿಮೆಗೆ ಸಾಕ್ಷಿಗಳಾಗಿವೆ. ಸುಳಾದಿ, ಉಗಾಭೋಗ, ದಂಡಕ, ವೃತ್ತನಾಮ, ಪದ ಇತ್ಯಾದಿ ಹಲವಾರು ಸಾಹಿತ್ಯ ಪ್ರಕಾರಗಳಲ್ಲಿ ಉತ್ಕೃಷ್ಟ ಸಾಹಿತ್ಯವನ್ನು ನೀಡಿರುವ ದಾಸರು ತ್ಯಾಗರಾಜರಿಗೆ ಮಾರ್ಗದರ್ಶಕರಾದರೆಂದರೆ ಅತಿಶಯೋಕ್ತಿ ಅಲ್ಲ. ತ್ಯಾಗರಾಜರಲ್ಲಿ ಹಲವಾರು ಸಮುದಾಯ ಕೃತಿಗಳ ಗುಚ್ಛವನ್ನು ಕಾಣಬಹುದು. ಇವುಗಳಲ್ಲಿ ಸುಮಾರು ಕ್ಷೇತ್ರಸಂದರ್ಶನಕ್ಕೆ ಸೇರಿದಂಥವು. ವಿಶೇಷವಾದ ತ್ಯಾಗರಾಜರ ಘನರಾಗ ಪಂಚರತ್ನಗಳಾದ ಜಗದಾನಂದಕಾರಕ, ದುಡುಕುಗಲ, ಕನಕನರುಚಿರಾ, ಸಾಧಿಂಚನೆ ಮತ್ತು ಎಂದರೋ ಮಹಾನುಭಾವುಲು ಪ್ರಬಂಧದ ಮಾದರಿಯಲ್ಲಿದ್ದು ಹಲವಾರು ಚರಣಗಳನ್ನು ಒಳಗೊಂಡಿದೆ. ಪುರಂದರದಾಸರ ಮಾದರಿಯನ್ನು ಅನುಸರಿಸಿ ಕೀರ್ತನ ರೂಪದಲ್ಲಿ ಬಂದಿರುವ ಉತ್ಸವ ಸಂಪ್ರದಾಯ ಕೀರ್ತನೆಗಳಾದ ಹೆಚ್ಚರಿಕಗಾ ರಾರ, ಶ್ರೀರಾಮರಾಮ, ಜಾನಕೀನಾಯಕ ಮತ್ತು ದಿವ್ಯನಾಮ ಸಂಕೀರ್ತನೆಗಳಾದ ತವದಾಸೋಹಂ, ರಘುನಂದನ, ಕುವಲಯದಳ ನಯನ, ನಾರಾಯಣ ಹರಿ ನಾರಾಯಣ ಮುಂತಾದವು ಸೊಗಸಾಗಿವೆ. ಈ ಕೀರ್ತನೆಗಳಲ್ಲಿ ಸಾಹಿತ್ಯವು ಅತೀ ಕ್ಲಿಷ್ಟವಾಗಿರದೆ ಸಂಗೀತದ ಧಾತುವೂ ಸುಲಭವಾಗಿದ್ದು ಭಜನ ಪದ್ದತಿಗೆ ಅನುಕೂಲವಾಗುವಂತೆ ಇದೆ. ದಿಗ್ಗಜರಿಬ್ಬರ ಸಂವಾದಿತ್ವವನ್ನು ಉದಯರಾಗದ ಕೃತಿಗಳಲ್ಲಿಯೂ ಕಾಣಬಹುದು. ಪುರಂದರದಾಸರು "ಏಳು ನಾರಾಯಣ ಏಳು ಲಕ್ಷ್ಮೀರಮಣ ಏಳು ಶ್ರೀಗಿರಿವಾಸ" ಎಂದು ಪಾಡಿದರೆ ತ್ಯಾಗರಾಜರು "ಮೇಲುಕೋವಯ್ಯ ಮಮ್ಮೇಲುಕೊ ಶ್ರೀರಾಮ" ಎಂದು ಹಾಡಿದ್ದಾರೆ. ಎರಡೂ ರಚನೆಗಳನ್ನು ಭೌಳಿರಾಗದಲ್ಲಿಯೇ ಹಾಡಲಾಗುತ್ತದೆ. ಲಾಲಿ ಹಾಡಿನಲ್ಲೂ ಇಬ್ಬರೂ ನಿಸ್ಸೀಮರೇ. ಪುರಂದರದಾಸರ ಹರಿ, ಅಥವಾ ನಿರ್ದಿಷ್ಟವಾಗಿ ಕೃಷ್ಣನ ಕುರಿತಾದ ಜೋಗುಳ ಪದಗಳು, ಲಾಲಿ ಹಾಡುಗಳು ಲಭ್ಯವಿದೆ. "ಲಾಲಿ ಲಾಲಿ ನಮ್ಮ ಹರಿಯೆ ಲಾಲಿ", "ಲಾಲಿಸಿದಳು ಮಗನ ಯಶೋದೆ" ಮುಂತಾದವು ರಮ್ಯವಾಗಿವೆ. ತ್ಯಾಗರಾಜರು ಶಂಕರಾಭರಣದಲ್ಲಿ "ರಾಮ ಶ್ರೀರಾಮ ಲಾಲಿ ಊಗುಚು ಘನ ಶ್ಯಾಮ ನನು ಬ್ರೋವು ಲಾಲಿ" ಎಂದು ಹಾಡಿದ್ದಾರೆ. ಕೇದಾರಗೌಳದ "ಲಾಲಿ ಲಾಲಯ್ಯ ಲಾಲಿ", "ಲಾಲಿ ಲಾಲಿಯನಿ ಊಚೇರಾ" ಎಂಬ ಹರಿಕಾಂಭೋಜಿಯ ಕೃತಿಗಳೂ ದೊರೆಯುತ್ತವೆ.

ಮಂಗಳವೂ ಈರ್ವರ ರಚನೆಗಳಲ್ಲಿ ಕಂಡುಬರುತ್ತದೆ. ಇವು ಸ್ತುತಿರೂಪವಾಗಿದ್ದು ಇವುಗಳ ಸಂಗೀತ ಯೋಜನೆಯೂ ಸುಲಲಿತವಾಗಿರುತ್ತದೆ.

**ಮಂಗಳಂ ಜಯ ಮಂಗಳಂ**
**ಶಕುತಿಯಿಂದಲಿ ಶಿಶುಪಾಲಾದಿ ಸಕಲ ರಾಯರ ಸಂಗಡ ಕಾದು**
**ರುಕುಮನ ಗೆಲಿದು ರೂಢಿಯಿಂದಲಿ ತಂದು ರುಕುಮಿಯಾಳಿದ ಶ್ರೀಕೃಷ್ಣಗೆ**

ಎಂಬಿತ್ಯಾದಿಯಾಗಿ ಹಲವಾರು ಪುರಂದರದಾಸರ ಮಂಗಳ ಸಾಹಿತ್ಯವು ದೊರೆತಿದೆ. ತ್ಯಾಗರಾಜರದ್ದೂ ಕೂಡ "ಜಯ ಮಂಗಳಂ ನಿತ್ಯ ಶುಭಮಂಗಳಂ" ಮುಂತಾದ ಹಲವು ಮಂಗಳ ಕೃತಿಗಳು ದೊರೆತಿವೆ. ಸೌರಾಷ್ಟ್ರ ರಾಗದ ನೀ ನಾಮರೂಪಮುಲಕು ಕೃತಿಯು ಪ್ರಸಿದ್ಧವಾಗಿದ್ದು, ಸಾಮಾನ್ಯವಾಗಿ ಇದನ್ನು ಹಾಡುವಾಗ ಮೊದಲಿನ ಚರಣವಾದ "ಪವಮಾನ ಸುತುಡು" ಎಂಬಲ್ಲಿಂದ ಪ್ರಾರಂಭಿಸುತ್ತಾರೆ. ಪ್ರತೀ ಚರಣದ ಸಾಲಿನ ಜೊತೆಗೆ ಪಲ್ಲವಿಯು ಅನ್ವಯವಾಗಿ ಹಾಡಲ್ಪಡುತ್ತದೆ. "ನೀ ನಾಮರೂಪಮುಲಕು ನಿತ್ಯ ಜಯ ಮಂಗಳಂ ಪವಮಾನ ಸುತುಡು ಪಟ್ಟು ಪಾದಾರವಿಂದಮುಲಕು ಎಂಬುದಾಗಿ ಈ ಮಂಗಳವಿದೆ.

ನವವಿಧ ಭಕ್ತಿಯ ಕುರಿತಾದ ಸಾಹಿತ್ಯದಲ್ಲಿ ಪುರಂದರದಾಸರ ನವವಿಧ ಭಕ್ತಿ ಸುಳಾದಿ ಪ್ರಮುಖವಾದದ್ದು. ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನ - ಇವೇ ನವವಿಧ ಭಕ್ತಿಗಳು. "ಹರಿಯ ಒಂಬತ್ತು ಭಕ್ತಿಯ ಬಲ್ಲ ಧೀರ" ಎಂದು ಆರಂಭವಾಗುವ ನವಭಕ್ತಿ ಸುಳಾದಿಯಲ್ಲಿ ಪ್ರತಿಯೊಂದು ವಿಧದ ಭಕ್ತಿಗೂ ಒಂದು ನುಡಿಯಿದೆ. ಕೊನೆಗೆ ಉಪಸಂಹಾರದಲ್ಲಿ ದಾಸರು ಒಂಬತ್ತು ವಿಧವನ್ನೂ ಹೇಳಿದ್ದಾರೆ.

**ಹರಿಕಥಾಶ್ರವಣವು, ಹರಿನಾಮಕೀರ್ತನೆ,**
**ಹರಿಸ್ಮರಣೆ, ಹರಿಪಾದಸೇವನ,**
**ಹರಿಪೂಜನ, ವಂದನ, ದಾಸ್ಯ, ಸಖ್ಯತ್ವ**
**ಹರಿಗಾತ್ಮ ಅರ್ಪಣ ಮುಕ್ತಿಪಥ ತತ್ತ್ವ**
**ಪುರಂದರವಿಟ್ಠಲ ಪರಮಾತ್ಮ ಸಿದ್ಧ**
**ಗುರುಮಧ್ವಮತ ಶ್ರುತಿಸ್ಮೃತಿಯೊಳು ಶುದ್ಧ**

ಈ ಸುಳಾದಿಯಲ್ಲದೇ ಹಲವಾರು ಬಿಡಿ ಕೀರ್ತನೆಗಳಲ್ಲಿಯೂ ಒಂದೊಂದು ರೀತಿಯ ಭಕ್ತಿಯ ಉಲ್ಲೇಖಗಳು ಕಾಣಬರುತ್ತವೆ. ನಾಮಸ್ಮರಣೆಯಂತೂ ದಾಸ ಸಾಹಿತ್ಯದ ಪ್ರಮುಖ ಕೇಂದ್ರಬಿಂದು. ಕೀರ್ತನೆಗಳ ಮೂಲಕ ನಾಮಸ್ಮರಣೆಯನ್ನು ಮಾಡುವುದು ಮಂಗಲಕರವೆಂದು ಸಾರಿದ್ದು ದಾಸಸಾಹಿತ್ಯ. ದಾಸರ "ಮರೆಯಬೇಡ ಮನವೆ ನೀನು ಹರಿಯ ಚರಣವ" ಎಂಬ ಕೃತಿಯಲ್ಲಿ "ಹರಿಯ ಸ್ಮರಣೆ ಮಾತ್ರದಿಂದ ದುರಿತಕುಲಗಳೆಲ್ಲ ನಾಶ" ಎಂಬುದಾಗಿ ಹೇಳುತ್ತಾರೆ. "ಮಧುಕರ ವೃತ್ತಿಯೆನ್ನದು" ಎನ್ನುವ ಕೀರ್ತನೆಯಲ್ಲಿ "ರಂಗನಾಥನ ಗುಣ ಹಿಂಗದೆ ಪಾಡುತ" ಎಂಬಲ್ಲಿ ಕೀರ್ತನ ಭಕ್ತಿಯನ್ನು ಕಾಣಬಹುದು. "ನರಸಿಂಹನ ಪಾದ ಭಜನೆಯ ಮಾಡೊ" ಎಂದು ಪಾದಸೇವನೆಯನ್ನೂ ಹೇಳಿದ್ದಾರೆ. ದಾಸ್ಯ ಭಕ್ತಿಯಂತೂ ದಾಸರ ಸಾಹಿತ್ಯದುದ್ದಗಲಕ್ಕೂ ಕಾಣಬರುತ್ತದೆ.

**ದಾಸನ್ನ ಮಾಡಿಕೊ ಎನ್ನ, ಇಷ್ಟು**
**ಘಾಸಿ ಮಾಡುವರೇನೋ ಕರುಣಾಸಂಪನ್ನ**
**ದುರುಳ ಬುದ್ಧಿಗಳೆಲ್ಲ ಬಿಡಿಸೋ ನಿನ್ನ**
**ಕರುಣ ಕವಚವೆನ್ನ ಹರಣಕ್ಕೆ ತೊಡಿಸೊ**

ಹೀಗೆ ಸಾಗುವ ಕೀರ್ತನೆ ಪ್ರಸಿದ್ಧವಾಗಿದೆ. ತ್ಯಾಗರಾಜರ ಹಲವಾರು ಕೀರ್ತನೆಗಳಲ್ಲಿ ಭಕ್ತಿಯ, ಭಕ್ತರ ಮಹಾತ್ಮೆ ಸುಂದರವಾಗಿ ಮೂಡಿಬಂದಿದೆ. ಪುರಂದರ ದಾಸರು ಮತ್ತು ತ್ಯಾಗರಾಜರೀರ್ವರೂ ಭಕ್ತಾಗ್ರೇಸರರು ಹಲವಾರು ಕ್ಷೇತ್ರಗಳನ್ನು ಸಂದರ್ಶಿಸಿ ಆಯಾ ಕ್ಷೇತ್ರದೇವತೆಗಳ ಬಗ್ಗೆ ಅತ್ಯುತ್ತಮವಾದ ರಚನೆಗಳನ್ನು ಮಾಡಿದ್ದಾರೆ. ಪುರಂದರದಾಸರು ಅರುಣಗಿರಿ, ಕಂಚಿ, ಶ್ರೀಮುಷ್ಣ, ಹಂಪಿ, ಉಡುಪಿ, ತಿರುಪತಿ ಮುಂತಾದ ಅನೇಕ ಕ್ಷೇತ್ರಗಳನ್ನು ದರ್ಶಿಸಿದ್ದಾರೆ. ತಿರುಪತಿಯ ವೇಂಕಟರಮಣನನ್ನು ಕುರಿತಾದ ಹಲವಾರು ಕೃತಿಗಳು ರಮ್ಯವಾಗಿವೆ.

**ವೇಂಕಟಾಚಲನಿಯಂ ವೈಕುಂಠ ಪುರವಾಸಂ**
**ಪಂಕಜನೇತ್ರಂ ಪರಮಪವಿತ್ರಂ**
**ಶಂಖಚಕ್ರಧರ ಚಿನ್ಮಯರೂಪಂ**

ಪ್ರಸಿದ್ಧವಾದ ಈ ಕೃತಿಯು ಸಂಸ್ಕೃತದಲ್ಲಿದೆ. ಉಡುಪಿಯ ಕೃಷ್ಣನ ಬಗೆಗೆ ಹಲವಾರು ಕೃತಿಗಳು ದೊರೆಯುತ್ತವೆ. ಹರಿದಾಸರಾದ ಪುರಂದರದಾಸರು ಶಿವನ ಕ್ಷೇತ್ರವಾದ ಅರುಣಾಚಲದ ಸಂದರ್ಶನವನ್ನೂ ಕೈಗೊಂಡು ಅರುಣಗಿರಿನಾಥನ ಮೇಲೆ ಸೊಗಸಾದ ಕೀರ್ತನೆಯೊಂದನ್ನು ರಚಿಸಿದ್ದಾರೆ.

**ಕರುಣಾನಿಧಿಯೆ ಈಶ ಅರುಣಗಿರಿವಾಸ**
**ಮುರನ ವೈರಿಯ ಚರಣದಾಸ**
**ಅರುಣ ರವಿಯ ಕೋಟಿಪ್ರಕಾಶ**

ಇತ್ಯಾದಿಯಾಗಿ ಕೀರ್ತನೆಯು ಸಾಗುತ್ತದೆ. ಪುರಂದರದಾಸರಂತೆ ತ್ಯಾಗರಾಜರಲ್ಲಿಯೂ ಕ್ಷೇತ್ರದೈವಗಳ ಕುರಿತಾದ ಕೃತಿಗುಚ್ಛಗಳನ್ನೇ ದಯಪಾಲಿಸಿದ್ದಾರೆ. ಕೋವೂರು ಪಂಚರತ್ನ, ಲಾಲ್ಗುಡಿ ಪಂಚರತ್ನ, ತಿರುವಯ್ಯಾರ್ ಸಮುದಾಯ ಕೃತಿಗಳು, ಶ್ರೀರಂಗಂ ಪಂಚರತ್ನಗಳಷ್ಟೇ ಅಲ್ಲದೇ ಕಂಚಿಯ ವರದರಾಜಸ್ವಾಮಿಯ ಕುರಿತ ಕೃತಿಗಳು ಮತ್ತು ತಿರುವಯ್ಯಾರಿನ ಪಂಚನದೀಶ್ವರನನ್ನು ಕುರಿತಾದ ಕೀರ್ತನೆಗಳೂ ಸೊಗಸಾಗಿವೆ. ಕೋವೂರು ಸಂದರ ಮೊದಲಿಯಾರರ ಕೋರಿಕೆಯ ಮೇರೆಗೆ ಕೋವೂರಿಗೆ ತೆರಳುವ ತ್ಯಾಗರಾಜರು ಅಲ್ಲಿನ ಸುಂದರೇಶ್ವರ ಸ್ವಾಮಿಯನ್ನು ಕುರಿತು ಸ್ತುತಿರೂಪವಾದ ಕೀರ್ತನೆಗಳನ್ನು ರಚಿಸಿದ್ದು ಅವುಗಳು ಕೋವೂರು ಪಂಚರತ್ನವೆಂದು ಪ್ರಸಿದ್ಧವಾಗಿವೆ.

ಪಂತುವರಾಳಿಯ "ಶಂಭೋ ಮಹಾದೇವ ಶಂಕರ ಗಿರಿಜಾರಮಣ" ಕೃತಿಯಿಂದ ಈ ಕೃತಿಗುಚ್ಛವು ಆರಂಭವಾಗುತ್ತದೆ. ಪ್ರಸಿದ್ಧವಾದ ಶಹನ ರಾಗದ "ಈ ವಸುಧಾ" ಕೂಡ ಈ ಕೃತಿ ಗುಚ್ಛದ ಒಂದು ಭಾಗವೇ. ಶಿಷ್ಯರಾದ ವೀಣಾ ಕುಪ್ಪಯ್ಯರ್ ಅವರ ಕೋರಿಕೆಯಂತೆ ಅವರ ಹುಟ್ಟೂರಾದ ತಿರುವೊಟ್ಟಿಯೂರಿಗೆ ಭೇಟಿ ನೀಡಿ ಅಲ್ಲಿನ ತ್ರಿಪುರಸುಂದರಿಯನ್ನು ದರ್ಶಿಸಿ ಅದ್ಭುತವಾದ ಐದು ಕೃತಿಗಳ ಗುಚ್ಛವನ್ನು ದಯಪಾಲಿಸಿದ್ದಾರೆ. ಇದು ತಿರುವೊಟ್ಟಿಯೂರು ಪಂಚರತ್ನವೆಂದೇ ಪ್ರಸಿದ್ಧವಾಗಿದೆ. ಶುದ್ಧ ಸಾವೇರಿ ರಾಗದ "ದಾರಿನಿ ತೆಲುಸುಕೊಂಟಿ" ಕೃತಿಯು ಈ ಪಂಚರತ್ನದಲ್ಲಿ ವಿಶೇಷವಾಗಿರುವ ಕೃತಿ. ಪ್ರತಿ ಚರಣದ ಕೊನೆಯಲ್ಲಿ ಮಧ್ಯಮ ಕಾಲದ ಸಾಹಿತ್ಯವಿದೆ. "ಸುಂದರಿ ನೀ ದಿವ್ಯ" ಎಂದು ಕಲ್ಯಾಣಿ ರಾಗದ ಮತ್ತೊಂದು ಪ್ರಸಿದ್ಧ ಕೃತಿ.

ತಿರುಚಿರಪ್ಪಳ್ಳಿಯ ಲಾಲ್ಗುಡಿಗೆ ತಮ್ಮ ಶಿಷ್ಯ ಲಾಲ್ಗುಡಿ ರಾಮಯ್ಯರ್ ಅವರ ಆಹ್ವಾನದ ಮೇರೆಗೆ ಹೋದಾಗ ಅಲ್ಲಿನ ಸಪ್ತಋಷೀಶ್ವರ ಮತ್ತು ಶ್ರೀಮತಿಯ ದರ್ಶನ ಪಡೆದು "ಲಾಲ್ಗುಡಿ ಪಂಚರತ್ನ"ವೆಂದು ಪ್ರಸಿದ್ಧವಾಗಿರುವ

ಕೃತಿಗಳನ್ನು ರಚಿಸಿದ್ದಾರೆ. ಇದರಲ್ಲಿ ತೋಡಿ ರಾಗದ "ಗತಿ ನೀವನಿ", ಭೈರವಿ ರಾಗದ "ಲಲಿತೇ ಶ್ರೀಪ್ರವೃದ್ದೇ" ಮತ್ತು ಕಾಂಭೋಜಿಯ "ಮಹಿತ ಪ್ರವೃದ್ದ ಶ್ರೀಮತಿ" ಕೃತಿಗಳು ದೇವೀಪರವಾಗಿದೆ. ಮಧ್ಯಮಾವತಿಯ "ದೇವ ಶ್ರೀ ತಪಸ್ತೀರ್ಥಪುರವಾಸ" ಮತ್ತು ಕಲ್ಯಾಣಿಯ "ಈಶ ಪಾಹಿಮಾಮ್" ಈಶ್ವರಪರವಾದ ರಚನೆಗಳು. ಶ್ರೀರಂಗಕ್ಕೆ ಭೇಟಿಯಿತ್ತ ತ್ಯಾಗರಾಜರು ರಂಗನಾಥಸ್ವಾಮಿಯನ್ನು ಕುರಿತಾದ ಸೊಗಸಾದ ಕೀರ್ತನಾಗುಚ್ಛವಾದ ಶ್ರೀರಂಗಂ ಪಂಚರತ್ನವನ್ನು ನೀಡಿದ್ದಾರೆ. ಪ್ರಸಿದ್ಧವಾದ "ಓ ರಂಗಶಾಯಿ" ಎಂಬ ಕಾಂಭೋಜಿ ರಾಗದ ಕೃತಿ, ತೋಡಿಯ "ರಾಜುವೆಡಲೆ" ಮುಂತಾದ ಕೃತಿಗಳು ಶ್ರೀರಂಗಂ ಪಂಚರತ್ನಕ್ಕೆ ಸೇರಿದವುಗಳೇ.

ಹರಿಸರ್ವೋತ್ತಮತ್ವವನ್ನು ಸಾರಿದ ಪುರಂದರದಾಸರ ಸಾಹಿತ್ಯದಲ್ಲಿ ಬೇರೆ ದೇವರುಗಳ ಕೀರ್ತನೆಯೂ ಇದೆ. ಮಾಧ್ವ ಸಂಪ್ರದಾಯದ ತಾರತಮ್ಯ ಪದ್ಧತಿಯನ್ನು ಅನುಸರಿಸಿರುವ ಪುರಂದರದಾಸರಲ್ಲಿ ಹಲವಾರು ದೇವೀಪರ ಕೀರ್ತನೆಗಳೂ ಕಾಣಬರುತ್ತವೆ. ಲಕ್ಷ್ಮಿಯ ಕುರಿತಾದ ಕೀರ್ತನೆಗಳು, ಸರಸ್ವತಿ, ಭಾರತಿ, ತುಳಸಿಯ ಜೊತೆಗೆ ತುಂಗಾ, ಭಾಗೀರಥಿ ನದೀದೇವತೆಗಳ ಕೀರ್ತನೆಗಳೂ ದೊರೆಯುತ್ತವೆ. ಖ್ಯಾತವಾದ "ಭಾಗ್ಯದ ಲಕ್ಷ್ಮೀ ಬಾರಮ್ಮ", "ಏನು ಧನ್ಯಳೋ ಲಕುಮಿ" ಮುಂತಾದವುಗಳು ಪುರಂದರ ದಾಸರ ರಚನೆಗಳೇ. ಸರಸ್ವತಿಯ ಕುರಿತಾದ ಕೀರ್ತನೆಗಳೂ ಸೊಗಸಾಗಿವೆ. ಅಲ್ಲಲ್ಲಿ ಸುಮಧುರ ಪ್ರಾಸ ಮುದ ನೀಡುತ್ತದೆ.

**ಶರಣೆಂಬೆ ವಾಣಿ ಪೊರೆಯೆ ಕಲ್ಯಾಣಿ**
**ವಾಗಭಿಮನಿ ವರಬ್ರಹ್ಮಾಣಿ**
**ಸುಂದರವೇಣಿ ಸುಚರಿತ್ರಾಣಿ**

ರಾಮನನ್ನೇ ಪರದೈವವೆಂದು ಸಾರಿದ ತ್ಯಾಗರಾಜರು ಬೇರೆ ದೇವರುಗಳ ಬಗ್ಗೆ ಕೂಡ ಅಮೋಘವಾದ ಕೃತಿರತ್ನಗಳನ್ನು ರಚಿಸಿದ್ದಾರೆ. ರಾಘವನ್ ಅವರ ಅಭಿಪ್ರಾಯದಂತೆ ತ್ಯಾಗರಾಜರು ಅದ್ವೈತ ಭಕ್ತ ಕವಿಗಳು. ಗಣಪತಿ, ಸುಬ್ರಹ್ಮಣ್ಯ ಮುಂತಾದ ದೇವರೊಂದಿಗೆ ವಿಶೇಷವಾಗಿ ತ್ರಿಪುರಸುಂದರಿಯ ಕುರಿತಾದ ಕೃತಿಗಳು ಸೊಗಸಾಗಿವೆ. ತಿರುವಯ್ಯಾರಿನ ಧರ್ಮಸಂವರ್ಧಿನಿ ಅಮ್ಮನವರನ್ನು ಕುರಿತಾದ ರಚನೆಗಳು ಅದ್ಭುತವಾಗಿವೆ. ಇವು ತಿರುವಯ್ಯಾರ್ ಸಮುದಾಯ ಕೃತಿಗಳೆಂದೇ ಪ್ರಸಿದ್ಧವಾಗಿವೆ. ಸುಮಾರು ಹತ್ತು ಕೃತಿಗಳು ಈ ಮಾಲಿಕೆಯಲ್ಲಿವೆ. ತೋಡಿ ರಾಗದ "ಕರುಣಜೂಡವಮ್ಮ", ಸಾವೇರಿಯ "ಪರಾಶಕ್ತಿಮನುಪರಾದ" ಮುಂತಾದ ಕೃತಿಗಳು ಪ್ರಸಿದ್ಧವಾಗಿವೆ. ಈ ಕೃತಿಗಳನ್ನು ಅವಲೋಕಿಸಿದಾಗ ತ್ಯಾಗರಾಜರಿಗೆ ದೇವೀ ಉಪಾಸನೆಯ ಮಜಲುಗಳ ಬಗ್ಗೆ ಇದ್ದ ಜ್ಞಾನ ಚಿಮ್ಮಿರುವುದು ಕಂಡುಬರುತ್ತದೆ. ಬಾಲಾ ತ್ರಿಪುರಸುಂದರಿಯ ಕುರಿತಾದ ಸೊಗಸಾದ "ಬಾಲೇ ಬಾಲೇಂದು" ಕೃತಿಯು ರೀತಿಗೌಳ ರಾಗದ ಕೃತಿರತ್ನ. ಪ್ರಾಸ ಮತ್ತು ಶಬ್ದಾಲಂಕಾರಗಳನ್ನು ಇಲ್ಲಿಯೂ ಕಾಣಬಹುದು.

**ಬಾಲೇ ಬಾಲೇಂದು ಭೂಷಣಿ ಭವರೋಗಶಮನಿ**
**ಫಾಲಲೋಚನೀ ಶ್ರೀಧರ್ಮಸಂವರ್ಧನಿ ಸಕಲಲೋಕ ಜನನಿ**
**ರಾಮೇ ಪ್ರಣತಾರ್ಥಿ ಹರಾಭಿರಾಮೆ ದೇವಕಾಮಿನಿ ಲಲಾಮೆ**
**ತ್ಯಾಗರಾಜ ಭಜನ ಸಕಾಮೇ ದುರ್ಜನ ಗಣಭೀಮೆ**

ಆರಭಿ ರಾಗದ "ಅಂಬ ನಿನ್ನು ನಮ್ಮಿತಿ" ಕೃತಿಯಲ್ಲಿಯೂ ಪದಲಾಲಿತ್ಯ ಸೊಗಸಾಗಿದೆ. ತುಳಸಿಯ ಕುರಿತಾದ "ಅಮ್ಮ ರಾವಮ್ಮ ತುಳಸಮ್ಮ ನನ್ನು ಪಾಲಿಂಪ" ಎಂಬ ಕಲ್ಯಾಣಿಯ ಕೃತಿಯೂ ಸ್ಮರಣಾರ್ಹ. ವಿಶೇಷ ಕೀರ್ತನೆಗಳ ಪ್ರಕಾರಗಳಲ್ಲಿ ದಶಾವತಾರವೂ ಒಂದು. ಪುರಂದರದಾಸರು ತಮ್ಮ "ಬಾರೆ ಗೋಪಮ್ಮ ನಿಮ್ಮ ಬಾಲಯ್ಯನಳುತಾನೆ" ಕೀರ್ತನೆಯಲ್ಲಿ ದಶಾವತಾರದ ವರ್ಣನೆಯನ್ನು ಬಹಳ ಸೊಗಸಾಗಿ ನಿರೂಪಿಸಿದ್ದಾರೆ. ಧರ್ಮ ಸಂಸ್ಥಾಪನೆಗಾಗಿ ಕೃಷ್ಣನ ಒಂದೊಂದು ಅವತಾರವು ಸೃಷ್ಟಿಯಾಗುತ್ತದೆ. ವಿಶೇಷ ಕೃತಿಗಳನ್ನು ರಚಿಸುವುದರಲ್ಲಿ ತ್ಯಾಗರಾಜರೂ ಶ್ರೇಷ್ಠರೇ. ತ್ಯಾಗರಾಜರು ತಮ್ಮ ಒಂದು ಕೃತಿಯಲ್ಲಿ ವಾಲ್ಮೀಕಿಯ ಶ್ರೀಮದ್ ರಾಮಾಯಣದ ಆರು ಕಾಂಡಗಳ ವಿಷಯಗಳನ್ನು ಸಂಕ್ಷೇಪವಾಗಿ ವರ್ಣಿಸಿದ್ದಾರೆ.

**ಬಡಲಕ ದೀರ ಪವ್ವಳಿಂತ್ಸವೇ**
**ತ್ಸಡಲನಿ ದುರಿತ ಮುನು ದೆಗಗೋಸಿ**
**ಸಾರ್ವಭೌಮ ಸಾಕೇತ ರಾಮ**

ಕೃಷ್ಣನನ್ನು ಪ್ರಾರ್ಥಿಸುವ ರೀತಿ ದಾಸರಲ್ಲಿ ಬಹಳ ವಿಶಿಷ್ಟವಾಗಿ ಮೂಡಿ ಬಂದಿದೆ. ಕೃಷ್ಣನನ್ನು ಬಹುವಿಧವಾಗಿ ಸ್ತುತಿಸುತ್ತ ಅವನು ಹೇಗೆಲ್ಲ ಒಲಿದು ಬರಬೇಕು ಎಂಬುದರ ಜೊತೆಗೆ ಆತನ ಮೇಲಿದ್ದ ಭಕ್ತಿಯನ್ನು ದಾಸರು ತಮ್ಮ ಕೀರ್ತನೆಗಳಲ್ಲಿ ನಿರೂಪಿಸಿದ್ದಾರೆ.

**ಬಾರೋ ಬ್ರಹ್ಮಾದಿವಂದ್ಯಾ**
**ಬಾರೋ ವಸುದೇವ ಕಂದ**
**ಗೊಲ್ಲರ ಮನೆಗೆ ಪೋಗಲು ಬೇಡ**
**ಗೋವಿಂದ ಕೇಳೋ**
**ಹಾಲು ಬೆಣ್ಣೆ ಮೊಸರಿಕ್ಕುವೆ**
**ನೀನುಣ್ಣು ಬಾರೋ**

ತ್ಯಾಗರಾಜರು ತಮ್ಮ ಕೃತಿಯಲ್ಲಿ ಕೃಷ್ಣನನ್ನೂ ಪ್ರಾರ್ಥಿಸಿರುವುದನ್ನು ಕಾಣಬಹುದು. ಗಾನಮೂರ್ತಿಯಾಗಿರುವ ಶ್ರೀಕೃಷ್ಣನನ್ನು ವೇಣುಗಾನಲೋಲ, ತ್ರಿಭುವನ ಪಾಲ, ನವನೀತ ಚೋರ, ಅರ್ಜುನನ ಮಿತ್ರ - ಹೀಗೆ ಹಲವು ರೀತಿಯಲ್ಲಿ ಕೃಷ್ಣನನ್ನು ಸ್ತುತಿಸಿದ್ದಾರೆ.

**ಗಾನ ಮೂರ್ತೇ ಶ್ರೀಕೃಷ್ಣ ವೇಣು**
**ಗಾನ ಲೋಲ ತ್ರಿಭುವನ ಪಾಲ ಪಾಹಿ**

ಪುರಂದರದಾಸರು ತಮ್ಮ ಕೀರ್ತನೆಗಳಲ್ಲಿ ವಿಶೇಷವಾಗಿ ರಾಮನನ್ನು ಸ್ತುತಿಸಿರುವುದನ್ನು ಕಾಣಬಹುದು. ಪುರಂದರದಾಸರ ಒಂಭತ್ತು ಕೀರ್ತನೆಗಳನ್ನು ನವರತ್ನ ಮಾಲಿಕಾ ಕೀರ್ತನೆಗಳೆಂದು ಕರೆಯಲಾಗುತ್ತದೆ. ಅವುಗಳಲ್ಲಿ ಒಂದಾದ "ಜಯ ಜಾನಕೀ ಕಾಂತ" ಕೀರ್ತನೆಯು ರಾಮನ ಮೇಲೆ ರಚಿತವಾಗಿರುವ ಸೊಗಸಾದ ಕೀರ್ತನೆ. ಈ ಕೃತಿಯಲ್ಲಿ ಬರುವ ಅನುಪ್ರಾಸ, ಶುದ್ಧಾಲಂಕಾರವು ಬಹಳ ಸೊಗಸಾಗಿದೆ. ಇಲ್ಲಿಯ ರಾಮನ ವರ್ಣನೆ ಅನುಪಮವಾಗಿ ಮೂಡಿಬಂದಿದೆ. ಹೆಚ್ಚು ಕಡಿಮೆ ಸಂಸ್ಕೃತದಲ್ಲಿಯೇ ರಚಿತವಾಗಿರುವ ಈ ಕೀರ್ತನೆ ಸಾಮಾನ್ಯವಾಗಿ ಸಂಗೀತ ಕಛೇರಿಯ ಆರಂಭದಲ್ಲಿ ಹಾಡಲಾಗುತ್ತದೆ.

ತ್ಯಾಗರಾಜರ ಸಂಗೀತ- ಸಾಹಿತ್ಯ ಪಾಂಡಿತ್ಯಕ್ಕೆ ಕೈಗನ್ನಡಿಯಾಗಿರುವುದು ಅವರ ಘನರಾಗ ಪಂಚರತ್ನ ಕೃತಿಗಳು. ಅದರಲ್ಲಿ ಒಂದಾದ "ಜಗದಾನಂದಕಾರಕ"ವು ರಾಮನಾಮ ವಿಶೇಷತೆಯಿಂದ ಕೂಡಿದೆ. ವಿಶ್ವಕ್ಕೇ ಕಲ್ಯಾಣವನ್ನುಂಟುಮಾಡುವವನೇ, ಮೂರು ಲೋಕಗಳಿಗೂ ಅಧಿಪತಿಯಾಗಿರುವವನೇ, ಸಮಸ್ತ ಪಾಪಗಳನ್ನೂ ತೊಳೆಯಬಲ್ಲಂಥವನೇ ನೀನಲ್ಲದೆ ಬೇರಾರು ಈ ಜಗತ್ತಿಗೆ ಆನಂದವನ್ನೀಯಬಲ್ಲರು ಎಂದು ರಾಮನನ್ನು ಸ್ತುತಿಸಿರುವುದನ್ನು ಕಾಣಬಹುದು.

ಭಗವಂತನೊಂದಿಗೆ ಸಖ್ಯವೇರ್ಪಟ್ಟಾಗ ಮತ್ತು ಭಗವಂತನನ್ನು ಒಬ್ಬ ಮಿತ್ರನನ್ನಾಗಿ ಪರಿಗಣಿಸಿದಾಗ ಒಂದು ಸಲಿಗೆ ಮೂಡುತ್ತದೆ. ಆ ಸಲಿಗೆಯಿಂದ ಹಲವಾರು ರೀತಿಯ ಸ್ತುತಿಗಳು ಮೂಡಿಬರುತ್ತದೆ. ಇಂತಹ ಸ್ತುತಿಗಳಲ್ಲಿ ನಿಂದಾ ಸ್ತುತಿಯೂ ಒಂದು ಪ್ರಕಾರ. ಹರಿದಾಸರಾದಿಯಾಗಿ ಅನೇಕ ಭಕ್ತ ಕವಿಗಳು ವಿವಿಧ ಭಾಷೆಗಳಲ್ಲಿ ನಿಂದಾ ಸ್ತುತಿಗಳನ್ನು ರಚಿಸಿದ್ದಾರೆ. ತಮಿಳು, ತೆಲುಗು, ಕನ್ನಡ ಭಾಷೆಗಳಲ್ಲಿ ನಿಂದಾ ಸ್ತುತಿಗಳು ದೊರೆಯುತ್ತದೆ. ನಿಂದೆಯ ರೂಪದಲ್ಲಿ ಸ್ತುತಿಸುವುದು ಈ ಪ್ರಕಾರದ ವಿಶೇಷ. ತೋರಿಕೆಗೆ ಅದು ನಿಂದೆಯಂತೆ ಕಂಡರೂ ಭಗವಂತನ ಮಹಿಮಾ ಗುಣಗಳನ್ನು, ಕಥೆಗಳನ್ನು ಹಾಗೂ ಪುರಾಣದ ಪ್ರಸಂಗಗಳನ್ನು ನಿಂದಾ ಸ್ತುತಿಗಳು ವರ್ಣಿಸುತ್ತವೆ. ಪುರಂದರದಾಸರು ಹಲವಾರು ನಿಂದಾ ಸ್ತುತಿಗಳನ್ನು ರಚಿಸಿದ್ದಾರೆ.

**ಆರು ಬದುಕಿದರಯ್ಯ ಹರಿ ನಿನ್ನ ನಂಬಿ**
**ತೋರು ಈ ಜಗದೊಳಗೆ ಒಬ್ಬರನು ಕಾಣೆ ಕೃಷ್ಣ**
**ತಿರಿದುಂಬ ದಾಸರ ಕೈಲಿ ಕಪ್ಪವನು ನೀ ಕೊಂಬೆ**
**ಗರುಡವಾಹನ ನಿನ್ನ ಚರಿಯವರಿಯೆ**
**ದೊರೆ ಪುರಂದರವಿಠಲ ನಿನ್ನನ್ನು ನಂಬಿದರೆ**
**ತಿರುಪೆಯು ಹುಟ್ಟಲೊಲ್ಲದು ಕೇಳೋ ಹರಿಯೆ**

ಪುರಂದರದಾಸರಂತೆಯೇ ತ್ಯಾಗರಾಜರು ನಿಂದಾ ಸ್ತುತಿಗಳನ್ನು ರಚಿಸಿದ್ದಾರೆ. ನಿನ್ನನ್ನು ಅರಸಿ ಬಂದವರಿಗೆ ಕರುಣೆಯನ್ನು ಏಕೆ ತೋರುವುದಿಲ್ಲ ಎಂದು ರಾಮನನ್ನು ನಿಂದಿಸಿರುವುದನ್ನು ನಾವು ನೋಡಬಹುದು.

**ಅಡಿಗಿ ಸುಖಮುಲೆವ್ವರನುಭವಿಂಚಿರಿರಾ**
**ಆದಿ ಮೂಲಮಾ ರಾಮ**
**ನೀಕೇ ದಯ ಪುಟ್ಟಿ ಬ್ರೋತುವೋ ಬ್ರೋವವೋ**
**ನೀ ಗುಟ್ಟು ಬಯಲಾಯೆ**

**ಸಾಕೇತ ಧಾಮ ಶ್ರೀತ್ಯಾಗರಾಜ ನುತ**
**ಸ್ವಾಮಿ ಏಟಿ ಮಾಯ ಓ ರಾಮ ನಿನ್ನ**

ಪುರಂದರದಾಸರು ವರ್ಣಿಸುವ ಕೃಷ್ಣನ ಚಿತ್ರಣ ಬಹು ಸೊಗಸಾಗಿ ಮೂಡಿಬಂದಿದೆ. ಕೃಷ್ಣನನ್ನು ಬಹುವಿಧವಾಗಿ ಕರೆಯುವ ರೀತಿ, ಆತನ ಬರುವಿಕೆಗೆ ತಾಯಿ ಕೊಡುವ ಬೆಣ್ಣೆ, ಭಕ್ಷ್ಯಗಳ ವರ್ಣನೆ ಅನುಪಮವಾಗಿ ನಿರೂಪಿತವಾಗಿದೆ.

**ಕೃಷ್ಣ ಬಾರೊ ಕೃಷ್ಣ ಬಾರೊ**
**ಕೃಷ್ಣಯ್ಯ ನೀ ಬಾರಯ್ಯ**
**ಹಾಲು ಬೆಣ್ಣೆಗಳ ಕೈಯಲಿ ಕೊಡುವೆ**
**ಮೇಲಾಗಿ ಭಕ್ಷ್ಯಗಳ ಬಚ್ಚಿಟ್ಟು ತರುವೆ**
**ಜಾಲಮಾಡದೆ ನೀ ಬಾರಯ್ಯ ಮರಿಯೆ**
**ಬಾಲ ಎನ ತಂದೆ ಪುರಂದರವಿಠಲ**

ಪುರಂದರದಾಸರನ್ನು ಅನುಸರಿಸುವ ತ್ಯಾಗರಾಜರು ತಮ್ಮ ಬಿಂದುಮಾಲಿನಿ ರಾಗದ ಕೃತಿಯೊಂದರಲ್ಲಿ ರಾಮ, ನಿನ್ನ ಸೊಗಸನ್ನು ಹೇಗೆ ಬಣ್ಣಿಸಲಿ ಎಂದು ಹೇಳುವುದರ ಜೊತೆಗೆ ಹಾಲಿನ ಮಡಕೆಗೆ ಹೇಗೆ ಹಾಲಿನ ರುಚಿಯು ತಿಳಿದಿರುವುದಿಲ್ಲವೋ ಹಾಗೆ ರಾಮನ ಅಪಾರ ಮಹಿಮೆಯನ್ನು ಎಲ್ಲರಿಗೂ ಅರಿಯಲು ಸಾಧವೇ ಎಂದು ಹೇಳುತ್ತಾರೆ.

**ಎಂತ ಮುದ್ದೋ ಎಂತ ಸೊಗಸೋ**
**ಎವರಿವಲ್ಲ ವರ್ಣಿಂಪ ತಗುನೇ**
**ಅತ್ತಮೀದ ಕನುಲಾಸಕು ದಾಸುಲೈ**
**ಸತ್ತಭಾಗವತ ವೇಷುಲೈರಿ**
**ದುತ್ತಪಾಲರುಚಿ ದೆಲಿಯು ಸಾಮ್ಯಮೆ**
**ಧುರೀಣುಡೌ ತ್ಯಾಗರಾಜನುತುಡು**

## 3. ಸಮಾರೋಪ

ಪುರಂದರದಾಸರು ಮತ್ತು ತ್ಯಾಗರಾಜರು ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ನೀಡಿರುವ ಕೊಡುಗೆ ಅಪಾರವಾದದ್ದು. ಅವರ ಕೃತಿಗಳನ್ನು ತೌಲನಿಕವಾಗಿ ನೋಡುವುದು ಅಸಾಧ್ಯವಾದ ಸಂಗತಿ. ಆದರೆ ಇಬ್ಬರು ನಾದೋಪಾಸಕರು ಒಂದೇ ಮಾದರಿಯಲ್ಲಿ ಹೇಗೆ ಚಿಂತಿಸಿದ್ದರು ಎನ್ನುವುದನ್ನು ಅರ್ಥೈಸಿಕೊಳ್ಳುವುದಕ್ಕೆ ಮಾತ್ರ ಇಂತಹ ಪ್ರಯತ್ನ ಸಾಕ್ಷಿಯಾಗಬಹುದು.

## ಪರಾಮರ್ಶನ ಗ್ರಂಥಗಳು:

1. ತ್ಯಾಗರಾಜ, ಪ್ರೊ. ಸಾ. ಕೃ. ರಾಮಚಂದ್ರ ರಾವ್, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, ೧೯೭೩
2. ಪುರಂದರ ಸಾಹಿತ್ಯ ದರ್ಶನ ಸಂಪುಟ ೧-೪, ವಿದ್ಯಾಲಂಕಾರ ಪ್ರೊ. ಸಾ. ಕೃ. ರಾಮಚಂದ್ರ ರಾವ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫
3. ಶ್ರೀ ತ್ಯಾಗರಾಜ ಕೃತಿಮಂಜರಿ ಸಂಪುಟ ೧ & ೨, ಡಾ. ವಿ. ಎಸ್. ಸಂಪತ್ಕುಮಾರಾಚಾರ್ಯ, ಡಿ. ವಿ. ಕೆ. ಮೂರ್ತಿ ಪ್ರಕಾಶನ, ಮೈಸೂರು, ೨೦೦೯
4. ನಮ್ಮ ಸಂಗೀತ ಮತ್ತು ವಾಗ್ಗೇಯಕಾರರು, ವಿದ್ಯಾಲಂಕಾರ ಪ್ರೊ. ಸಾ. ಕೃ. ರಾಮಚಂದ್ರ ರಾವ್, ಸುರಮಾ ಪ್ರಕಾಶನ, ಬೆಂಗಳೂರು, ೨೦೧೪
5. ಹರಿದಾಸ ಸಾಹಿತ್ಯ ಸಾರ, ಜಿ ವರದರಾಜರಾವ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೫
6. Collected Writings on Indian Music, Vol I - III, Dr V Raghavan, Dr V Raghavan Centre for Performing Arts, Chennai, 2020